**ಕರ್ನಾಟಕ ಸರ್ಕಾರ**

ಸಂಖ್ಯೆ: ಗ್ರಾಅಪ 182 ಸ್ಥೀಮರ 2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:27-10-2014.

**ಇವರಿಂದ:**

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,
ಬಹುಮಹಡಿ ಕಟ್ಟಡ,
ಬೆಂಗಳೂರು-560001.

**ಇವರಿಗೆ:**

ಎಲ್ಲಾ ಜಿಲ್ಲಾ ಪಂಚಾಯತ್‌ಗಳ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು

**ಮಾನ್ಯರೇ,**

**ವಿಷಯ:-** ಹೈದರಾಬಾದ್ - ಕರ್ನಾಟಕ ಪ್ರದೇಶಕ್ಕೆ ಮೀಸಲಾತಿಯನ್ನು ನಿಗಧಿಪಡಿಸುವ ಬಗ್ಗೆ.

*******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಹೈದರಾಬಾದ್ - ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವೃಂದಕ್ಕೆ ಸೇರ್ಪಡೆಯಾಗಲು ಇಚ್ಛೆ ವ್ಯಕ್ತಪಡಿಸಿ ಸಲ್ಲಿಸಿರುವ ನೌಕರರ ಮನವಿ ಬಗ್ಗೆ ಆ ನೌಕರರನ್ನು ನೇಮಕ ಮಾಡಿದ ಪ್ರಾಧಿಕಾರವು ಪರಿಶೀಲಿಸಿ, ನಿಯಮಾನುಸಾರ ಅರ್ಹರಿದ್ದಲ್ಲಿ ಆತನ ಸೇವೆ ಖಾಯಂ ಆಗಿ ಬಿಟ್ಟುಕೊಡಲು ಒಪ್ಪಿಗೆ ನೀಡತಕ್ಕದ್ದು, ಅದೇ ರೀತಿ ಯಾವ ಜಿಲ್ಲೆಗೆ ನೇಮಕಾತಿ ಮಾಡಬೇಕಿದೆಯೇ ಆ ಜಿಲ್ಲೆಯ ನೇಮಕಾತಿ ಪ್ರಾಧಿಕಾರ ಸಹ ಸ್ಥಳೀಯ ವೃಂದದಲ್ಲಿ ಹುದ್ದೆ ಖಾಲಿ ಇರುವ ಬಗ್ಗೆ ಪರಿಶೀಲಿಸಿ, ಅಂತಹವರ ಸೇವೆ ಪಡೆಯಲು ಒಪ್ಪಿಗೆ ನೀಡಬೇಕಾಗಿರುತ್ತದೆ. ಈ ರೀತಿ ಪರಸ್ಪರ ಒಪ್ಪಿಗೆ ನೀಡಿದ ನಂತರ ಅಂತಿಮವಾಗಿ ಸ್ಥಳೀಯ ವೃಂದಕ್ಕೆ ಸೇರಿಸಿಕೊಳ್ಳುವ ನೇಮಕಾತಿ ಪ್ರಾಧಿಕಾರ ಆದೇಶವನ್ನು ಹೊರಡಿಸತಕ್ಕದ್ದು, ಈ ದಿಸೆಯಲ್ಲಿ ನೇಮಕಾತಿ ಪ್ರಾಧಿಕಾರಗಳು ಆದೇಶ ಹೊರಡಿಸಲು ಅನುವಾಗುವಂತೆ ಎರಡು ಪ್ರತ್ಯೇಕ ನಮೂನೆಗಳನ್ನು ತಯಾರಿಸಿ ಇದರೊಂದಿಗೆ ಲಗತ್ತಿಸಿದ್ದು, ಈ ದಿಸೆಯಲ್ಲಿ ತ್ವರಿತವಾಗಿ ಕ್ರಮಕೈಗೊಳ್ಳುವಂತೆ ಕೋರಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಸಿದ್ದೇಶ ಪೋತಲಕಟ್ಟಿ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

## ನಮೂನೆ – 1

### ಹೈದರಾಬಾದ್ – ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವೃಂದಕ್ಕೆ ಸೇರ್ಪಡೆಯಾಗಲು ಇಚ್ಛಿಸಿರುವ ಅಧಿಕಾರಿ / ನೌಕರನ ಸೇವೆಯನ್ನು ಬಿಟ್ಟುಕೊಡಲು ಪ್ರಸಕ್ತ ನೇಮಕಾತಿ ಪ್ರಾಧಿಕಾರದ ಸಹಮತಿ ಪತ್ರದ ನಮೂನೆ

| ಕ್ರ.ಸಂ. | ಹೈದರಾಬಾದ್ – ಕರ್ನಾಟಕ ಪ್ರದೇಶದ ಸ್ಥಳೀಯ ವೃಂದಕ್ಕೆ ಸೇರ್ಪಡೆ ಹೊಂದಲು ಇಚ್ಛಿಸಿರುವ ಅಧಿಕಾರಿ / ನೌಕರನ ಹೆಸರು / ಹುದ್ದೆ | ಮೂಲತ: ನೇಮಕಾತಿ ಹೊಂದಿದ ಜಿಲ್ಲೆ ಹಾಗೂ ನೇಮಕಾತಿ ಪ್ರಾಧಿಕಾರ | ನೇಮಕಾತಿ ಆದೇಶ ಸಂಖ್ಯೆ ಮತ್ತು ದಿನಾಂಕ | ಸದರಿ ಅಧಿಕಾರಿ / ನೌಕರ ಹೈದರಾಬಾದ್ – ಕರ್ನಾಟಕ ಪ್ರದೇಶ ವ್ಯಾಪ್ತಿಗೆ ಸೇರಿದವರೇ ? | ಹಾಗಿದ್ದಲ್ಲಿ, ಯಾವ ಜಿಲ್ಲೆ, ಅವರು ಸದರಿ ಪ್ರದೇಶಕ್ಕೆ ಸೇರಿದವರೆಂದು ದೃಢೀಕರಿಸುವ ಬಗೆಗಿನ ದಾಖಲಾತಿ* ಪ್ರತಿ ಲಗತ್ತಿಸುವುದು | ಹೈದರಾಬಾದ್ – ಕರ್ನಾಟಕ ಪ್ರದೇಶದ ಯಾವ ಜಿಲ್ಲೆಯ ಸ್ಥಳೀಯ ವೃಂದಕ್ಕೆ ಈಗ ಸೇರಲು ಇಚ್ಛಿಸುತ್ತಾರೆ. | --- ಜಿಲ್ಲೆಯ ಸ್ಥಳೀಯ ವೃಂದಕ್ಕೆ ಸೇರ್ಪಡೆ ಮಾಡುವ ಸಲುವಾಗಿ ಅವರ ಸೇವೆಯನ್ನು ಬಿಟ್ಟುಕೊಡಲು ಪ್ರಸ್ತುತ ನೇಮಕಾತಿ ಪ್ರಾಧಿಕಾರದ ಒಪ್ಪಿಗೆ ಇದೆಯೇ ? |
|---|---|---|---|---|---|---|---|
| 1 | 2 | 3 | 4 | 5 | 6 | 7 | 8 |
| | | | | | | | |
| | | | | | | | |
| | | | | | | | |

*** ಟಿಪ್ಪಣಿ:–** ಈ ಬಗ್ಗೆ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್ – ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕ್ರಮ ಸಂಖ್ಯೆ 6ನ್ನು ನೋಡುವುದು.

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ,

----------ಜಿಲ್ಲಾ ಪಂಚಾಯತ್,

-------------------ಜಿಲ್ಲೆ.

ಸ್ಥಳ :

ದಿನಾಂಕ :

11

## ನಮೂನೆ - 2

### ಹೈದರಾಬಾದ್ – ಕರ್ನಾಟಕ ಪ್ರದೇಶ ವ್ಯಾಪ್ತಿಯ ಸ್ಥಳೀಯ ವೃಂದಕ್ಕೆ ಸೇರ್ಪಡೆಯಾಗಲು ಇಚ್ಚಿಸಿರುವ ಅಧಿಕಾರಿ / ನೌಕರನ ಸೇವೆಯನ್ನು ಪಡೆಯಲು ನೇಮಕಾತಿ ಪ್ರಾಧಿಕಾರದ ಸಹಮತಿ ಪತ್ರದ ನಮೂನೆ

| ಕ್ರ.ಸಂ. | ಹೈದರಾಬಾದ್ – ಕರ್ನಾಟಕ ಸ್ಥಳೀಯ ವೃಂದಕ್ಕೆ ಸೇರ್ಪಡೆ ಹೊಂದಲು ಇಚ್ಚಿಸಿರುವ ಅಧಿಕಾರಿ / ನೌಕರನ ಹೆಸರು | ಮೂಲತ: ನೇಮಕಾತಿ ಹೊಂದಿದ ಜಿಲ್ಲೆ ಹಾಗೂ ನೇಮಕಾತಿ ಪ್ರಾಧಿಕಾರ | ನೇಮಕಾತಿ ಆದೇಶ ಸಂಖ್ಯೆ ಮತ್ತು ದಿನಾಂಕ | ಸದರಿ ಅಧಿಕಾರಿ / ನೌಕರ ಹೈದರಾಬಾದ್ – ಕರ್ನಾಟಕ ಪ್ರದೇಶದ ಯಾವ ಜಿಲ್ಲೆಯ ವ್ಯಾಪ್ತಿಗೆ ಸೇರಿದವರಾಗಿದ್ದಾರೆ ಹಾಗೂ ಅದಕ್ಕೆ ದೃಢೀಕೃತ ದಾಖಲೆ ಒದಗಿಸಿರುವರೇ ? | ಹೈದರಾಬಾದ್ – ಕರ್ನಾಟಕ ಪ್ರದೇಶದ ಯಾವ ಜಿಲ್ಲೆಯ ಸ್ಥಳೀಯ ವೃಂದಕ್ಕೆ ಈಗ ಸೇರಲು ಇಚ್ಚಿಸಿರುತ್ತಾರೆ. | ----- ಜಿಲ್ಲೆಯ ಸ್ಥಳೀಯ ವೃಂದಕ್ಕೆ ಸೇರಲು ಪ್ರಸಕ್ತ ನೇಮಕಾತಿ ಪ್ರಾಧಿಕಾರ ಅವರ ಸೇವೆಯನ್ನು ಬಿಟ್ಟು ಕೊಡಲು ಒಪ್ಪಿಗೆ ನೀಡಿದೆಯೇ ? | ಸದರಿ ಅಧಿಕಾರಿ / ನೌಕರನನ್ನು --- ಜಿಲ್ಲೆಯ ಸ್ಥಳೀಯ ವೃಂದಕ್ಕೆ ನೇಮಿಸಿ ಕೊಳ್ಳಲು ಹೈದರಾಬಾದ್ – ಕರ್ನಾಟಕ ಪ್ರದೇಶದ ಮೀಸಲಾತಿ ನಿಯಮಗಳನ್ವಯ ಜಿಲ್ಲೆಯಲ್ಲಿ ಹುದ್ದೆ ಖಾಲಿ ಇದೆಯೇ | --- ಜಿಲ್ಲೆಯ ಸ್ಥಳೀಯ ವೃಂದಕ್ಕೆ ಸೇರ್ಪಡೆ ಮಾಡಿಕೊಳ್ಳುವ ಸಲುವಾಗಿ ಅವರ ಸೇವೆಯನ್ನು ಪಡೆಯಲು ನೇಮಕಾತಿ ಪ್ರಾಧಿಕಾರದ ಸಹಮತಿ ಇದೆಯೇ ? |
|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 |
| | | | | | | | | |
| | | | | | | | | |
| | | | | | | | | |

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ.

----------ಜಿಲ್ಲಾ ಪಂಚಾಯತ್.

------------------ಜಿಲ್ಲೆ.

ಸ್ಥಳ :

ದಿನಾಂಕ :